**Dr. B. DINESHA**
MBBS, MD, DM (Cardiology)
**Professor of Cardiology & DIRECTOR**

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ
**Sri Jayadeva Institute of Cardiovascular Sciences & Research**
(Government of Karnataka Regd. Autonomous Institute)
Bannerghatta Road, Jayanagar, Bangalore - 560 069
Tel.: 080 - Direct : 2297 7456 Contact No.: 2297 7422 / 433
E.mail : director.sjicr@gmail.com
Website : www.jayadevacardiology.com

ಉ: ಎಸ್‌ಜೆಐಸಿಆರ್/ಆಪ್ತವಿಭಾಗ/ 341/೨೦೨೫-೨೦೨೬

ದಿ. ೨೬ನೇ ನವೆಂಬರ್ ೨೦೨೫

# ***ಪತ್ರಿಕಾಪ್ರಕಟಣೆ***

## ಫಿಲಿಪ್ಪೈನ್ಸ್ ಮಗುವಿಗೆ ಜಯದೇವ ಆಸ್ಪತ್ರೆಯಲ್ಲಿ ಯಶಸ್ವಿ ತೆರೆದ ಹೃದಯ ಶಸ್ತ್ರಚಿಕಿತ್ಸೆ

ಫಿಲಿಫೈನ್ಸ್ ಮೂಲದ **ಎರಡು ವರ್ಷದ ಅವಿಯನ್ ಅಲಿನ್ ಜೇಡ್ ಅಮೊರೊಸೋ ರೇ** ಗೆ ಜನ್ಮಜಾತ ಹೃದಯ ರೋಗವಾದ **ಟೆಟ್ರಾಲಜಿ ಆಫ್ ಫಲ್ಲಾಟ್ (ಟಿಒಎಫ್)** ದೃಢಪಟ್ಟಹಿನ್ನಲೆ, ಬೆಂಗಳೂರಿನ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನೆರವೇರಿಸಲಾಗಿದೆ ಎಂದು ಆಸ್ಪತ್ರೆ ನಿರ್ದೇಶಕರಾದ **ಡಾ. ಬಿ ದಿನೇಶ್** ಮಾಹಿತಿ ನೀಡಿದ್ದಾರೆ.

ಪೋಷಕರು ಮಗುವನ್ನು ಮೊದಲು **ಫಿಲಿಪ್ಪೈನ್ಸ್ ಹಾರ್ಟ್ ಸೆಂಟರ್**‌ನಲ್ಲಿ ತಪಾಸಣೆಗೆ ಒಳಪಡಿಸಿದ್ದರು. ಆಗ ಮಗುವಿನಲ್ಲಿ ಟೆಟ್ರಾಲಜಿ ಆಫ್ ಫಲ್ಲಾಟ್ ದೃಢಪಟ್ಟಿದೆ. ಹೀಗಾಗಿ ಅಲ್ಲಿ ಅಗತ್ಯ ಚಿಕಿತ್ಸಾ ಸೌಲಭ್ಯ ಲಭ್ಯವಿಲ್ಲದ ಕಾರಣ ಮಗುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಜಯದೇವ ಆಸ್ಪತ್ರೆ ದಾಖಲಿಸಿಕೊಳ್ಳುವಂತೆ ರೋಟರಿ ಸಂಸ್ಥೆಯು ಇಮೇಲ್ ಮೂಲಕ ಮಗುವಿನ ಎಲ್ಲಾ ಪರಿಕ್ಷಾ ವರದಿಗಳನ್ನು ಜಯದೇವ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದರು. ಮಗುವಿನ ಎಲ್ಲಾ ಪರೀಕ್ಷಾ ವರದಿಗಳನ್ನು ನಮ್ಮ ಆಸ್ಪತ್ರೆಯ ಮಕ್ಕಳ ಹೃದ್ರೋಗ ವಿಭಾಗದ ವೈದ್ಯರು ಹಾಗೂ ನುರಿತ ಶಸ್ತ್ರಚಿಕಿತ್ಸಕರು ಅಧ್ಯಯನ ಮಾಡಿ ಮಗುವನ್ನು ಜಯದೇವ ಆಸ್ಪತ್ರೆಗೆ ಬರುವಂತೆ ತಿಳಿಸಲಾಯಿತು.

ಮಗು ತೀವ್ರ ಉಸಿರಾಟದ ಸಮಸ್ಯೆ, ಸೈನೊಸಿಸ್ ಹಾಗೂ ದಣಿವಿನಿಂದ ಬಳಲುತ್ತಿತ್ತು. ಜೊತೆಗೆ ವೈದ್ಯಕೀಯ ತಪಾಸಣೆ ವೇಳೆ ಮಗುವಿನ ರೂಮ್ ಆಕ್ಸಿಜನ್ ಸ್ಯಾಚುರೇಶನ್ ಕೇವಲ 75% ಇತ್ತು. ಹೀಗಾಗಿ ಮಗುವನ್ನು ದಿನಾಂಕ 01, ನವೆಂಬರ್ 2025 ರಂದು ಆಸ್ಪತ್ರೆಗೆ ದಾಖಲಾತಿ ಮಾಡಿಕೊಂಡು, ದಿನಾಂಕ, ನವೆಂಬರ್ 10ರಂದು ಮಗುವನ್ನು ತೆರೆದ ಹೃದಯ ಶಸ್ತ್ರಚಿಕಿತ್ಸೆಗೆ ಒಳಪಡಿಸಿ, **(TOF ರಿಪೇರಿ – ICR, VSD ಕ್ಲೋಷರ್, RVOT ರಿಸೆಕ್ಷನ್ ಮತ್ತು ಬಲ ಎಟ್ರಿಯಲ್ ಅಪೆಂಡೇಜ್ ಮರುನಿರ್ಮಾಣ)** ಯಶಸ್ವಿಯಾಗಿ ನೆರವೇರಿಸಲಾಗಿದೆ. **ರೋಟರಿ ಬೆಂಗಳೂರು ಮಿಡ್‌ಟೌನ್, ರೋಟರಿ ನೀಡೀ ಹಾರ್ಟ್ ಫೌಂಡೇಶನ್ ಮತ್ತು ಜಯದೇವ ಆಸ್ಪತ್ರೆಯ ಸಹಭಾಗಿತ್ವದಲ್ಲಿ ರಿಯಾಯಿತಿ ದರದಲ್ಲಿ** ಚಿಕಿತ್ಸೆ ನೀಡಲಾಗಿದೆ.

ಶಸ್ತ್ರಚಿಕಿತ್ಸೆಯ ನಂತರ ಮಗುವಿನ ಆರೋಗ್ಯ ಸಂಪೂರ್ಣ ಸುಧಾರಿಸಿದೆ. ಹೀಗಾಗಿ ಮಗುವನ್ನು ದಿನಾಂಕ 26ರಂದು ಆಸ್ಪತ್ರೆಯಿಂದ ಬಿಡುಗಡೆ ಗೊಳಿಸಲಾಗಿದೆ. **ಪ್ರೊ. ಡಾ. ಜಯರಂಗನಾಥ (ಮಕ್ಕಳಹೃದ್ರೋಗತಜ್ಞ), ಪ್ರೊ. ಡಾ. ಸುನಿಲ್ ಪಿ.ಕೆ (ಮುಖ್ಯಸ್ಥರು, ಮಕ್ಕಳ ಹೃದ್ರೋಗ ಶಸ್ತ್ರಚಿಕಿತ್ಸಾ ವಿಭಾಗ), ಡಾ. ರಶ್ಮಿ ಎ ಕೋಟೆಚಾ, ಡಾ. ಹರೀಶ್ ಮಹಾಬಲ ಮುಖ್ರಿ ಹಾಗೂ ಪ್ರೊ. ಡಾ. ಪರಿಮಳ ಪ್ರಸನ್ನ ಸಿಂಹ (ಹೃದಯ ಅನಸ್ತೇಶಿಯಾಲಜಿಸ್ಟ್)** ರವರು ಶಸ್ತ್ರಚಿಕಿತ್ಸೆಯನ್ನು ಯಶಸ್ವಿಗೊಳಿಸಿದ್ದಾರೆ. ಹೀಗಾಗಿ ವೈದ್ಯರ ತಂಡಕ್ಕೆ ಸಂಸ್ಥೆಯ ನಿರ್ದೇಶಕರು ಅಭಿನಂದನೆ ಸಲ್ಲಿಸಿದ್ದಾರೆ.

B. D.

ನಿರ್ದೇಶಕರು

ನಿರ್ದೇಶಕರು
ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ
ಜಯನಗರ ೯ನೇ ಬ್ಲಾಕ್, ಬನ್ನೇರುಘಟ್ಟ ರಸ್ತೆ,
ಬೆಂಗಳೂರು - 560 069

**Dr. B. DINESHA**
MBBS, MD, DM (Cardiology)
**Professor of Cardiology & DIRECTOR**

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ
**Sri Jayadeva Institute of Cardiovascular Sciences & Research**
**(Government of Karnataka Regd. Autonomous Institute)**
Bannerghatta Road, Jayanagar, Bangalore - 560 069
Tel.: 080 - Direct : 2297 7456 Contact No.: 2297 7422 / 433
E.mail : director.sjicr@gmail.com
Website : www.jayadevacardiology.com

Ref. No: SJICR/PER/342/2025- 26

Date: 26.11.2025

# ***PRESS RELEASE***

## **Successful open heart surgery for philippines child at Jayadeva Hospital**

Two-Year-Old Child from the Philippines Successfully Undergoes 'Tetralogy of Fallot' Surgery at Jayadeva Institute of Cardiovascular Sciences and Research

According to **Dr. B Dinesh**, the Director of Jayadeva Institute, a two year's old child from the Philippines, **Aviannalyn Jade Amoroso Rey**, diagnosed with the Congenital Heart Disease - Tetralogy of Fallot (TOF), successfully underwent corrective surgery at Sri Jayadeva Institute of Cardiovascular Sciences and Research, Bengaluru.

After the initial diagnosis at the Philippines Heart Centre, the child was referred through Rotary to Jayadeva Hospital for advanced treatment. the Rotary organization sent all the child's test reports to Jayadeva Hospital by through email for further management. After studying all the test reports, the pediatric cardiologists and experienced surgeons at our hospital advised for Tetralogy of Fallot' Surgery. The treatment was done at subsidized cost Sponsoredby the **Rotary Bangalore Midtown, Rotary Needy Heart Foundation and Jayadeva Hospital**.

The child was admitted to Jayadeva Hospital on 01.11.2025, with severe breathing difficulty, fatigue on exertion, and cyanosis. During medical evaluation, the child's room air saturation was noted to be only **75%.** Later on 10.11.2025 an open-heart surgery—including TOF repair (ICR), VSD closure, RVOT resection and reconstruction, along with right atrial appendage—was successfully performed. The postoperative period was smooth, and the child was discharged in a stable condition on 26.11.2025.

The Doctor's team at Jayadeva Hospital included **Prof. Dr. Jayarangnath (Paediatric Cardiologist), Prof. Dr. Sunil P. K. (Chief Paediatric Surgeon), Dr. Rashmi A. Kotecha, Dr. HareeshMahabalaMukri (Cardiothoracic Surgeons), and Prof. Dr. ParimalaPrasannaSimha (Cardiac Anaesthesiologist)**, who played key roles during the Surgery.

B. D[signature]

**DIRECTOR**

DIRECTOR
Sri Jayadeva Institute of Cardiovascular Sciences and Research
Jayanagar 9th Block, Bannerghatta Road
Bengaluru - 560 069